# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570 006

ದಿನಾಂಕ 27.09.2019ರಂದು ಪೂರ್ವಾಹ್ನ 11.30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಕಛೇರಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 14ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿ.

<table>
<tr><th colspan="2">ಉಪಸ್ಥಿತರು</th></tr>
<tr><td>ಪ್ರೊ. ಎಸ್. ವಿದ್ಯಾಶಂಕರ್<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು.</td><td>ಪ್ರೊ. ರಮೇಶ್. ಬಿ<br>ಕುಲಸಚಿವರು,<br>ಕರಾಮುವಿ,<br>ಮೈಸೂರು.</td></tr>
<tr><td>ಪ್ರೊ. ಡಿ.ಟಿ. ಬಸವರಾಜ್<br>ಡೀನ್ (ಅಧ್ಯಯನ ಕೇಂದ್ರಗಳು) ಮತ್ತು<br>ಡೀನ್ (ಶೈಕ್ಷಣಿಕ) (ಕಾ.ಭಾ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು.</td><td>ಡಾ. ಎ. ಖಾದರ್ ಪಾಷಾ<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು, ಕರಾಮುವಿ, ಮೈಸೂರು.</td></tr>
<tr><td colspan="2">ಪ್ರೊ. ಎ. ರಂಗಸ್ವಾಮಿ<br>ಕುಲಸಚಿವ (ಪರೀಕ್ಷಾಂಗ) ಹಾಗೂ ಶೈಕ್ಷಣಿಕ ಮಂಡಳಿ ಸದಸ್ಯರು, ಕರಾಮುವಿ, ಮೈಸೂರು.</td></tr>
<tr><th colspan="2">ಅನುಪಸ್ಥಿತರು</th></tr>
<tr><td colspan="2">ಡಾ॥ ಲಕ್ಷ್ಮಿ.ಎನ್<br>ಮುಖ್ಯಸ್ಥರು, ಶಿಕ್ಷಣಶಾಸ್ತ್ರ ವಿಭಾಗ ಹಾಗೂ ಶೈಕ್ಷಣಿಕ ಮಂಡಳಿ ಸದಸ್ಯರು, ಕರಾಮುವಿ, ಮೈಸೂರು.</td></tr>
</table>

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ, 14ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಿದರು.

**ವಿಷಯ ಸಂಖ್ಯೆ : 14.01**

**ವಿಷಯ: ಶ್ರೀಮತಿ ಸೌಮ್ಯ ಕೆ, ಪ್ರಥಮ ಎಂ.ಎ. ಅರ್ಥಶಾಸ್ತ್ರ (ನೋ.ಸಂ: 11003100267) ವಿದ್ಯಾರ್ಥಿನಿಯ ಅಂಕಗಳ ನ್ಯೂನತೆ ಬಗೆಗೆ.**

*****

ಶ್ರೀಮತಿ ಸೌಮ್ಯ ಕೆ, ಇವರು ಪ್ರಥಮ ಎಂ.ಎ. ಅರ್ಥಶಾಸ್ತ್ರ ವಿಷಯಕ್ಕೆ ನೋ.ಸಂ: 11003100267 ರಡಿಯಲ್ಲಿ ಪ್ರವೇಶಾತಿ ಪಡೆದಿದ್ದು, ಮೇ / ಜೂನ್ 2012ರಲ್ಲಿ ಪ್ರಥಮ ಎಂ.ಎ. ಹಾಗೂ ಜೂನ್ 2013ರಲ್ಲಿ ದ್ವಿತೀಯ ಎಂ.ಎ. ಪದವಿ ಪೂರ್ಣಗೊಳಿಸಿರುತ್ತಾರೆ.

ಕುಲಪತಿಗಳು 27/9 | ಕುಲಸಚಿವರು 27/9

ಈ ವಿದ್ಯಾರ್ಥಿನಿಯ ನೈಜತೆ ಪ್ರಮಾಣ ಪತ್ರವನ್ನು ವಿತರಿಸುವ ಸಂದರ್ಭದಲ್ಲಿ ಅಂಕಪಟ್ಟಿಗಳಲ್ಲಿರುವ ಆಂತರಿಕ ನಿಬಂಧನೆಗಳ (ಐ.ಎ.) ಅಂಕಗಳೊಂದಿಗೆ ಪರೀಕ್ಷಾ ವಿಭಾಗ ಹಾಗೂ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ದಾಖಲೆಗಳನ್ನು ಪರಿಶೀಲಿಸಿದಾಗ ಪತ್ರಿಕೆ–1ಕ್ಕೆ - 06 ಅಂಕ ಹಾಗೂ ಪತ್ರಿಕೆ - 05ಕ್ಕೆ 4 ಎಂದು ನಮೂದಾಗಿರುತ್ತದೆ ಆದರೆ ವಿದ್ಯಾರ್ಥಿನಿಗೆ ವಿತರಿಸಲಾಗಿರುವ ಮೂಲ ಅಂಕಪಟ್ಟಿಯಲ್ಲಿ ಹಾಗೂ ಅಂಕಗಳ ವಹಿ (ಲೆಡ್ಜರ್)ಯಲ್ಲಿ ಪತ್ರಿಕೆ–1ಕ್ಕೆ 8 ಹಾಗೂ ಪತ್ರಿಕೆ 5ಕ್ಕೆ 9 ಎಂದು ತಪ್ಪಾಗಿ ಅಂಕಗಳು ನಮೂದಾಗಿರುತ್ತದೆ.

ಪ್ರಥಮ ಎಂ.ಎ. ಮೇ / ಜೂನ್ 2012ರ ಪರೀಕ್ಷೆಯಲ್ಲಿ ಪತ್ರಿಕೆ–2ಕ್ಕೆ ಮೌಲ್ಯಮಾಪನದಲ್ಲಿ 69 ಅಂಕಗಳು ಗಳಿಸಿದ್ದು, ವಿದ್ಯಾರ್ಥಿನಿಯು ಈ ಪತ್ರಿಕೆಯನ್ನು ಮರು ಮೌಲ್ಯಮಾಪನಕ್ಕೆ ಅರ್ಜಿಸಲ್ಲಿಸಿದ್ದು ಮರು ಮೌಲ್ಯಮಾಪನದಲ್ಲಿ 61 ಅಂಕಗಳು ಬಂದಿರುತ್ತದೆ. ಹಾಗಾಗಿ ಮೊದಲನೇ ಮೌಲ್ಯಮಾಪನದ ಅಂಕಗಳಿಗೂ ಹಾಗೂ ಮರು ಮೌಲ್ಯಮಾಪನದ ಅಂಕಗಳಿಗೂ 8 ಅಂಕಗಳು ವ್ಯತ್ಯಾಸವಿದ್ದು, ಈ ವಿದ್ಯಾರ್ಥಿನಿಗೆ ಅಂಕಪಟ್ಟಿಯನ್ನು ವಿತರಿಸುವಾಗ ಮೊದಲನೇ ಮೌಲ್ಯಮಾಪನದಲ್ಲಿ ಪಡೆಯಲಾಗಿದ್ದ 69 ಅಂಕಗಳನ್ನು ನೀಡಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳ ನ್ಯೂನತೆಗಳ ಪರಿಶೀಲನಾ ಸಮಿತಿಗೆ ದಿನಾಂಕ: 09.09.2019 ರಂದು ವಿಷಯವನ್ನು ಮಂಡಿಸಲಾಗಿ ಸಮಿತಿಯು ಸದರಿ ವಿಷಯವನ್ನು ಕರಾಮುವಿ 'ಪರೀಕ್ಷಾ ಕೈಪಿಡಿ' ಹಾಗೂ ಪರೀಕ್ಷಾ ನಿಯಮಗಳಂತೆ ಪರಿಶೀಲಿಸಿ ವರದಿಯನ್ನು ಸಲ್ಲಿಸಲಾಗಿದ್ದು, ಸದರಿ ವರದಿಯನ್ನು ಅನುಷ್ಠಾನಗೊಳಿಸುವ ಸಂಬಂಧ ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ :** **ಸದರಿ ವಿಷಯವನ್ನು ಪರೀಕ್ಷಾ ನಿಯಮಗಳಡಿಯಲ್ಲಿ ಚರ್ಚಿಸಿದ ಸಭೆಯು ಸಹಜ ನ್ಯಾಯದಡಿಯಲ್ಲಿ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು.**

---

**ವಿಷಯ ಸಂಖ್ಯೆ: 14.02**

ವಿಷಯ : ಕರಾಮುವಿಯ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಬಗೆಗೆ.

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಉನ್ನತಶಿಕ್ಷಣ ಪ್ರಸಾರ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವ ಸಂಬಂಧ ಹೆಚ್ಚುವರಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿ ದಿನಾಂಕ: 17–07–2019 ರಂದು ಪತ್ರಿಕೆ ಜಾಹೀರಾತನ್ನು ನೀಡಿತ್ತು. ಇದರನ್ವಯ ಹಲವು ಕಾಲೇಜುಗಳಿಂದ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ತೆರೆಯುವ ಸಂಬಂಧ ತಮ್ಮ ಒಪ್ಪಿಗೆಯನ್ನು ಸೂಚಿಸಿ, ಅಗತ್ಯ ಅಡಕಗಳುಳ್ಳ 92 ಅರ್ಜಿಗಳು ಬಂದವು.

ಈ ಅರ್ಜಿಗಳನ್ನು ಪರಿಶೀಲಿಸಲಾಗಿದೆ. ಪ್ರವೇಶಾತಿ ಅಧಿಕ ಸಂಖ್ಯೆಯಲ್ಲಿರುವ, ಭೌಗೋಳಿಕ ಪ್ರಾತಿನಿಧ್ಯ ಪರಿಗಣಿಸಿರುವ ಮೂಲಭೂತ ಶೈಕ್ಷಣಿಕ ಸೌಲಭ್ಯವನ್ನು ಹೊಂದಿರುವ ಅರ್ಹ ಕಾಲೇಜುಗಳನ್ನು ಆಯ್ದು, ಯು.ಜಿ.ಸಿ ಮುಕ್ತ ಮತ್ತು ದೂರ ಶಿಕ್ಷಣ ನಿಯಮಾವಳಿ 2017ರಂತೆ ಪ್ರಸಕ್ತ (2019–20) ಶೈಕ್ಷಣಿಕ ಸಾಲಿನಿಂದ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ತೆರೆಯಲು ಅರ್ಹ ಕಾಲೇಜುಗಳ ಪಟ್ಟಿ ಸಿದ್ಧಪಡಿಸಿದ್ದು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ತರುತ್ತಾ ಅನುಮೋದನೆ ಕೋರಿದೆ. ಅಡಕ: ಆಯ್ದ 37 ಕಾಲೇಜಿನ ಪಟ್ಟಿ.

**ತೀರ್ಮಾನ :** **ಪರಿಶೀಲನಾ ತಂಡವು ಅಕ್ಟೋಬರ್ 2019ರ ಒಳಗೆ ಕಾಲೇಜುಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ತೀರ್ಮಾನಿಸಲಾಯಿತು ಹಾಗೂ ಪರಿಶೀಲನಾ ತಂಡವು ನೀಡುವ ವರದಿಯನ್ನು ಆಧರಿಸಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲು ಅನುಮೋದನೆ ನೀಡಲಾಯಿತು.**

---

**ಕುಲಪತಿಗಳು** 27/9

**ಕುಲಸಚಿವರು** 27/9

**ವಿಷಯ ಸಂಖ್ಯೆ : 14.03**

**ವಿಷಯ: ವಿಶ್ವವಿದ್ಯಾನಿಲಯದ ಪದವಿ ಹೊಂದಿದ ವಿದ್ಯಾರ್ಥಿಗಳಿಗೆ ವಿವಿಧ ಪ್ರಮಾಣ ಪತ್ರಗಳನ್ನು ವಿತರಿಸುವ ಸಂದರ್ಭಗಳಲ್ಲಿ ಕಂಡು ಬಂದ ನ್ಯೂನತೆಗಳನ್ನು ಪರಿಹರಿಸಲು ರಚಿತವಾಗಿರುವ ಸಮಿತಿಯ ದಿನಾಂಕ: 25.09.2019ರಂದು ನಡೆದ ಸಭೆಯ ನಡಾವಳಿ ಅನುಮೋದನೆ ಬಗ್ಗೆ.**

****

ವಿಶ್ವವಿದ್ಯಾನಿಲಯದ ಪದವಿ ಹೊಂದಿದ ವಿದ್ಯಾರ್ಥಿಗಳಿಗೆ ವಿವಿಧ ಪ್ರಮಾಣ ಪತ್ರಗಳನ್ನು ವಿತರಿಸುವ ಸಂದರ್ಭಗಳಲ್ಲಿ ಕಂಡು ಬಂದ ನ್ಯೂನತೆಗಳನ್ನು ಪರಿಹರಿಸಲು ರಚಿತವಾಗಿರುವ ಸಮಿತಿಯು ದಿನಾಂಕ: 25.09.2019ರಂದು ಸಭೆ ಸೇರಿ ಈ ಕೆಳಕಂಡ ವಿದ್ಯಾರ್ಥಿಗಳ ಪರೀಕ್ಷಾ ದಾಖಲೆಗಳ ಪರಿಶೀಲನಾ ಹಂತದಲ್ಲಿ ಕಂಡು ಬಂದ ನ್ಯೂನತೆಗಳನ್ನು ಗಮನಿಸಿ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಶಿಫಾರಸ್ಸನ್ನು ನಡಾವಳಿಯಲ್ಲಿ ನೀಡಿರುತ್ತದೆ.

| ಕ್ರಮ ಸಂಖ್ಯೆ | ವಿದ್ಯಾರ್ಥಿ ಹೆಸರು | ಶಿಕ್ಷಣಕ್ರಮ | ನೋಂದಣಿ ಸಂಖ್ಯೆ |
|---|---|---|---|
| 01 | ಶ್ರೀ ಕ್ಲಿಮ್ಸ್ ಟಿ ಜೆ | ಎಂ.ಎ ಅರ್ಥಶಾಸ್ತ್ರ | 363101 / 0803105002 |
| 02 | ಶ್ರೀಮತಿ ಸುಮಿತ್ರ ಎಲ್ | ಬಿ.ಕಾಂ | 5779 |
| 03 | ಶ್ರೀಮತಿ ಲತಾಶ್ರೀ ಕೆ ಎನ್ | ಬಿ ಎ | 7031902 |
| 04 | ಶ್ರೀಮತಿ ಶಿಲ್ಪ ಎಂ ಆರ್ | ಬಿ ಎ | 7030668 |
| 05 | ಶ್ರೀಮತಿ ಗೀತಾ ದೇವಿ ಡಿ ಎಸ್ | ಬಿ ಎ | 433791 |
| 06 | ಶ್ರೀಮತಿ ವಿಜಯಲಕ್ಷ್ಮೀ.ಕೆ | ಬಿ.ಕಾಂ | 12010 |
| 07 | ಶ್ರೀ ಸುರೇಶ್ ಕುಮಾರ್ ಡಿ | ಎಂ.ಕಾಂ | 692689 |
| 08 | ಶ್ರೀ ಯಶ್ವಂತ್.ಎಂ ಜಿ | ಬಿ.ಎ / ಎಂ.ಎ | 6331290 / 29192 |

ಸದರಿ ಸಮಿತಿಯ ನಡಾವಳಿಯನ್ನು 14ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ, ನಿರ್ಣಯ ಮತ್ತು ಅನುಮೋದನೆಗಾಗಿ ಮಂಡಿಸಿದೆ.

ತೀರ್ಮಾನ : **ಘಟನೋತ್ತರವಾಗಿ ಸಹಜ ನ್ಯಾಯದ ಅಡಿಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಸಮಿತಿಯ ನಡಾವಳಿಗೆ ಅನುಮೋದನೆ ನೀಡಲಾಯಿತು.**

-----

**ವಿಷಯ ಸಂಖ್ಯೆ : 14.04**

**ವಿಷಯ: ಸಂಸ್ಕೃತ ವಿಷಯದಲ್ಲಿ ಪಿಎಚ್.ಡಿ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರ ಬದಲಾವಣೆ ಮಾಡಿಕೊಡುವ ಬಗೆಗೆ.**

*****

ವಿಶ್ವವಿದ್ಯಾನಿಲಯದ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ದಿವಂಗತ ಪ್ರೊ. ರಾಧಕೃಷ್ಣ ಭಟ್ ನಿವೃತ್ತ ಪ್ರಾಧ್ಯಾಪಕರು ಇವರ ಮಾರ್ಗದರ್ಶನದಲ್ಲಿ ಶ್ರೀಮತಿ. ಜಯಶ್ರೀ ಭಟ್ ನೋಂದಣಿ ಸಂಖ್ಯೆ: 12281, ಶ್ರೀ.ಅರವಿಂದ ನಯನ ನೋಂದಣಿ ಸಂಖ್ಯೆ: 12282, ಶ್ರೀಮತಿ. ವಿ.ಆರ್. ತ್ರಿಪುರ ನೋಂದಣಿ ಸಂಖ್ಯೆ: 11280 ಈ ಮೂರು ವಿದ್ಯಾರ್ಥಿಗಳು ಪಿಎಚ್.ಡಿ ಆದ್ಯಾದೇಶ 2008ರ ಪ್ರಕಾರ ಸಂಶೋಧನಾ ವಿದ್ಯಾರ್ಥಿಗಳಾಗಿ ನೋಂದಣಿಯಾಗಿರುತ್ತಾರೆ.

ಕುಲಪತಿಗಳು 27/9 | ಕುಲಸಚಿವರು 27/9

ವಿಶ್ವವಿದ್ಯಾನಿಲಯಕ್ಕೆ ಮಾನ್ಯತೆ ಬಿಕ್ಕಟ್ಟಿನಿಂದ ಸ್ಥಗಿತಗೊಂಡಿರುವ ಪಿಎಚ್.ಡಿ ವಿದ್ಯಾರ್ಥಿಗಳ ಸಂಶೋಧನೆಯನ್ನು ಮುಂದುವರೆಸುವ ಸಲುವಾಗಿ ದಿನಾಂಕ: 06-07-2019ರಂದು ಹೊರಡಿಸಿರುವ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಪವಿ/ಪಿಎಚ್.ಡಿ/69/2019-20. (ಪ್ರತಿ ಲಗತ್ತಿಸಿದೆ) ಪ್ರಕಾರ ಮುಂದುವರೆಸಲಾಗಿದ್ದು, ಪ್ರೊ. ರಾಧಕೃಷ್ಣ ಭಟ್ ರವರು ಸೇವೆಯಿಂದ ನಿವೃತ್ತರಾದ ಬಳಿಕ ನಿಧನ ಹೊಂದಿರುತ್ತಾರೆ. ಈ ಸಂಬಂಧವಾಗಿ ಸದರಿ ವಿದ್ಯಾರ್ಥಿಗಳು ಮಾರ್ಗದರ್ಶಕರ ಬದಲಾವಣೆ ಮಾಡಿಕೊಡಬೇಕಾಗಿದ್ದು, ಅದರಲ್ಲಿ ಶ್ರೀಮತಿ. ಜಯಶ್ರೀ ಭಟ್ ನೋಂದಣಿ ಸಂಖ್ಯೆ: 12281 ರವರು ಮಾತ್ರ ಮಾರ್ಗದರ್ಶಕರ ಬದಲಾವಣೆಗಾಗಿ ಪತ್ರ ಬರೆದಿದ್ದು, (ಪ್ರತಿ ಲಗತ್ತಿಸಿದೆ) ಮುಂದೆ ಶ್ರೀ. ಅರವಿಂದ ನಯನ ಮತ್ತು ಶ್ರೀಮತಿ. ವಿ.ಆರ್. ತ್ರಿಪುರ ವಿದ್ಯಾರ್ಥಿಗಳು ಮಾರ್ಗದರ್ಶಕರ ಬದಲಾವಣೆ ಕೇಳಬಹುದಾದ ಹಿನ್ನೆಲೆಯಲ್ಲಿ ಈ ಮೂರು ವಿದ್ಯಾರ್ಥಿಗಳಿಗೂ ಸೇರಿದಂತೆ ಮಾರ್ಗದರ್ಶಕರ ಬದಲಾವಣೆ ಮಾಡಿ ಕೊಡಬೇಕಾಗಿರುತ್ತದೆ.

ಡೀನ್ (ಶೈಕ್ಷಣಿಕ) ರವರ ಅಧ್ಯಕ್ಷತೆಯಲ್ಲಿ ಪಿಎಚ್.ಡಿ ಸಮಿತಿಯೊಂದನ್ನು ರಚಿಸಿ, ಸದರಿ ಸಮಿತಿಯು ದಿನಾಂಕ: 23-03-2019ರಂದು ನೀಡಿರುವ ಶಿಫಾರಸ್ಸಿನಲ್ಲಿ ನಿಯಮಾನುಸಾರ ಮಾರ್ಗದರ್ಶಕರ ಬದಲಾವಣೆಗೆ ಕ್ರಮವಹಿಸಬಹುದು ಎಂದು ಶಿಫಾರಸ್ಸು ಮಾಡಿದ್ದು, (ಪ್ರತಿ ಲಗತ್ತಿಸಿದೆ). ಅದರಂತೆ ಪಿಎಚ್.ಡಿ ಆದ್ಯಾದೇಶ 2008ರಲ್ಲಿ ಕ್ರಮ ಸಂಖ್ಯೆ: 11ರಲ್ಲಿ Change of Guide/Title/Topic ಬಗ್ಗೆ 11.1 ರಲ್ಲಿ (ಪ್ರತಿ ಲಗತ್ತಿಸಿದೆ) ಮಾಹಿತಿ ಇದ್ದು ಪ್ರಸ್ತುತ, ಸಂಸ್ಕೃತ ವಿಭಾಗದಲ್ಲಿ ಖಾಯಂ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಇಲ್ಲದ ಕಾರಣ ಸದರಿ ವಿದ್ಯಾರ್ಥಿಗಳು ಮಾರ್ಗದರ್ಶಕರ ಬದಲಾವಣೆ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ.

**ತೀರ್ಮಾನ :** **ಕರಾಮುವಿ ಸಂಸ್ಕೃತ ವಿಭಾಗದಲ್ಲಿ ಅಂಗೀಕೃತ ಪಿ.ಹೆಚ್.ಡಿ ಮಾರ್ಗದರ್ಶಕರು ಇಲ್ಲದ ಕಾರಣ, ಇವರಿಗೆ ಮಾರ್ಗದರ್ಶನ ಮಾಡಲು ಮಾನವಿಕ ವಿಷಯಗಳ ಕನ್ನಡ ವಿಭಾಗದ ಮಾರ್ಗದರ್ಶಕರಿಗೆ ಹೆಚ್ಚುವರಿಯಾಗಿ ಹಂಚಿಕೆ ಮಾಡಲು ತೀರ್ಮಾನಿಸಲಾಯಿತು. ಇತರೆ ವಿಶ್ವವಿದ್ಯಾನಿಲಯಗಳ ಅರ್ಹ ಸಂಸ್ಕೃತ ವಿಭಾಗದ ಮಾರ್ಗದರ್ಶಕರನ್ನು ಸಹ ಮಾರ್ಗದರ್ಶಕರಾಗಿ ಪಡೆದುಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಲು ತೀರ್ಮಾನಿಸಲಾಯಿತು.**

-----

**ವಿಷಯ ಸಂಖ್ಯೆ : 14.05**

**ವಿಷಯ: ಯು.ಜಿ.ಸಿ ನಿಯಮಾವಳಿ 2018ರ ಪ್ರಕಾರ ಅಧ್ಯಾಪಕರುಗಳ Self-appraisal ಪಡೆಯುವ ಬಗ್ಗೆ.**

******

2018ರ ಯು.ಜಿ.ಸಿ ನಿಯಮಾವಳಿ ಪ್ರಕಾರ ವಿಶ್ವವಿದ್ಯಾನಿಲಯಗಳ ಅಧ್ಯಾಪಕ ವೃಂದದವರು ಪ್ರತಿ ಶೈಕ್ಷಣಿಕ ವರ್ಷದ ಶಿಕ್ಷಣ ಯೋಜನೆಯ ಪ್ರಗತಿಗೆ ಸಂಬಂಧಿಸಿದ Self-appraisal ಅನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ Self-appraisal ಪಡೆಯುವ ಸಂಬಂಧ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಪದ್ಧತಿ ಹಾಗೂ ಇನ್ನಿತರೆ ಸಾಂಸ್ಥಿಕ ಅಗತ್ಯತೆಗಳೊಂದಿಗೆ ನಮೂನೆಯನ್ನು ಸಿದ್ಧಪಡಿಸಿಕೊಂಡು, ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಾಪಕರುಗಳಿಂದ Self-appraisal ಪಡೆಯುವ ಕ್ರಿಯೆಯನ್ನು ಅನುಷ್ಠಾನಗೊಳಿಸಲು 14ನೇ ವಿಶೇಷ ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ವಿಷಯವನ್ನು ಚರ್ಚೆ ಮತ್ತು ನಿರ್ಣಯಕ್ಕೆ ಮಂಡಿಸಿದೆ.

**ತೀರ್ಮಾನ :** Self-appraisal format **ಅನ್ನು ಅನುಮೋದಿಸಿ ಮುಂದಿನ ಪ್ರಕ್ರಿಯೆಗೆ ಶಿಫಾರಸ್ಸುಗೊಳಿಸಲಾಯಿತು.**

**ಕುಲಪತಿಗಳು** 27/9

**ಕುಲಸಚಿವರು** 27/9

ವಿಷಯ ಸಂಖ್ಯೆ : 14.06

**Sub: Submission of the Annual Report of the CIQA by the HEI to UGC for the recognized programmes offered under ODL for the year 2018-19.**

*****

Under UGC ODL Regulations 2017, it is mandatory on the part of HEIs to submit the annual report of CIQA to the UGC, duly approved by the statutory bodies. During 2018-19 the University has carried out many quality initiatives to impart quality education to the prime stakeholders. The information relating to CIQA, admissions, learner support centers, examinations, general section, quality assurances given by the academic section, UGC cell and infrastructure have been collected, analysed as per the format given by the UGC and prepared the report. Office of the CIQA has executed the work as per the directives of the UGC DEB, New Delhi. The report is placed before the statutory bodies of the university for the approval.

ತೀರ್ಮಾನ : CIQA ಸಿದ್ಧಪಡಿಸಿರುವ ವಾರ್ಷಿಕ ವರದಿಯನ್ನು ಅನುಮೋದಿಸಲಾಯಿತು, ಮುಂದಿನ ಪ್ರಕ್ರಿಯೆಗಾಗಿ ಶಿಫಾರಸ್ಸು ಮಾಡಲಾಯಿತು.

-----

ವಿಷಯ ಸಂಖ್ಯೆ : 14.07

**ವಿಷಯ: ಕರಾಮುವಿ ನಿಲಯದಲ್ಲಿ 2001-02 ರಿಂದ 2012-13 ರವರೆಗೆ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪಡೆದು ಪರೀಕ್ಷೆ ತೆಗೆದುಕೊಂಡಿಲ್ಲದ ವಿದ್ಯಾರ್ಥಿಗಳಿಗೆ ಒಂದು ಬಾರಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡುವ ಬಗೆಗೆ.**

******

ಕರಾಮುವಿ ನಿಲಯದಲ್ಲಿ 2004-05 ರಿಂದ 2012-13ನೇ ಸಾಲಿನಲ್ಲಿ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪಡೆದು ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಒಂದು ಬಾರಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡುವ ಸಂಬಂಧ ದಿನಾಂಕ: 13.06.2019 ರಂದು ನಡೆದ 10ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ವಿಷಯ ಮಂಡಿಸಲಾಗಿ ಸದರಿ ಪ್ರಸ್ತಾವನೆಗೆ ದಿನಾಂಕ: 05.08.2019 ರಂದು ನಡೆದ 157ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆ ದೊರಕಿರುತ್ತದೆ (ಪ್ರತಿ ಲಗತ್ತಿಸಿದೆ).

2001-02ನೇ ಸಾಲಿನಲ್ಲಿ ಪ್ರವೇಶಾತಿ ಪಡೆದು ಅನುತ್ತೀರ್ಣಗೊಂಡಿರುವ ಹಲವು ವಿದ್ಯಾರ್ಥಿಗಳು ಮಾನ್ಯ ಕುಲಸಚಿವ (ಪರೀಕ್ಷಾಂಗ) ರವರನ್ನು ಭೇಟಿ ಮಾಡಿ ಮನವಿ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಈ ಸಂಬಂಧ ಮಾನ್ಯ ಕುಲಪತಿಗಳೊಂದಿಗೆ ಸಮಾಲೋಚನೆ ಮಾಡಿ 2001-02 ರಿಂದ 2012-13ನೇ ಸಾಲುಗಳಲ್ಲಿ ಪ್ರವೇಶಾತಿ ಪಡೆದು ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡಿರುವ / ಪರೀಕ್ಷೆ ತೆಗೆದುಕೊಂಡಿಲ್ಲದ ವಿದ್ಯಾರ್ಥಿಗಳಿಗೂ ಒಂದು ಅವಕಾಶವನ್ನು ಕಲ್ಪಿಸುವ ಹಿತದೃಷ್ಟಿಯಿಂದ ಸದರಿ ಸಾಲಿನ ವಿದ್ಯಾರ್ಥಿಗಳಿಗೆ ಒಂದು ಬಾರಿ ಪೂರಕ ಪರೀಕ್ಷೆಗಳನ್ನು ನಡೆಸುವ ಸಂಬಂಧ ಸಮಾಲೋಚಿಸಿ ನಿರ್ಣಯ ಕೈಗೊಳ್ಳಲು ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆ ಕೋರಿ ವಿಷಯವನ್ನು ಪುನರ್ ಮಂಡಿಸಿದೆ.

ತೀರ್ಮಾನ : ಈ ಹಿಂದಿನ ಶಿಫಾರಸ್ಸಿನ ವಿಷಯದಲ್ಲಿ ನಮೂದಾಗಿರುವ ವರ್ಷಗಳನ್ನು **2001-02 ರಿಂದ 2012-13ನೇ** ಸಾಲುಗಳು ಎಂದು ವಿಸ್ತರಿಸಿಕೊಳ್ಳಲು ಅನುಮೋದಿಸಿದೆ.

-----

ಕುಲಪತಿಗಳು 27/9.

ಕುಲಸಚಿವರು 27/9

**ವಿಷಯ ಸಂಖ್ಯೆ : 14.08**

**ವಿಷಯ : 2018–19ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿವಿಧ ವಿಜ್ಞಾನ ವಿಷಯಗಳ ವಿವಿಧ ಎಂ.ಎಸ್ಸಿ. ವಿಜ್ಞಾನ ಹಾಗೂ ಎಂ.ಬಿ.ಎ. ವಿಷಯಗಳ ದ್ವಿತೀಯ ಸೆಮಿಷ್ಟರ್ ಸಂಪರ್ಕ ಕಾರ್ಯಕ್ರಮಗಳ ಅಂದಾಜು ವೆಚ್ಚಕ್ಕೆ ಅನುಮೋದನೆ ಮಾಡುವ ಬಗ್ಗೆ.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2018–19ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಎಂ.ಎಸ್ಸಿ. ವಿಜ್ಞಾನ ವಿಷಯಗಳಿಗೆ ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳಿಗೆ ದ್ವಿತೀಯ ಸೆಮಿಸ್ಟರ್ ಸಂಪರ್ಕ ಕಾರ್ಯಕ್ರಮವನ್ನು ಸೆಪ್ಟಂಬರ್/ಅಕ್ಟೋಬರ್ 2019 ರಿಂದ ನಡೆಸಲು ಉದ್ದೇಶಿಸಿದೆ. ಪ್ರಯೋಗಾಲಯ ಬಳಕೆ ಶುಲ್ಕ, ರಾಸಾಯನಿಕಗಳ ಖರೀದಿ ಹೊರತುಪಡಿಸಿ ತಗಲುವ ಅಂದಾಜು ವೆಚ್ಚವನ್ನು ಪಟ್ಟಿಯಲ್ಲಿ ನಮೂದಿಸಿದೆ. ಸದರಿ ಸಂಪರ್ಕ ಕಾರ್ಯಕ್ರಮವನ್ನು ನಡೆಸಲು ಅನುಮತಿ ಮತ್ತು ಅಂದಾಜು ವೆಚ್ಚದ ಪಟ್ಟಿಗೆ ಅನುಮೋದನೆ ಕೋರಲಾಗಿದೆ.

<u>ಅಂದಾಜು ವೆಚ್ಚ ಈ ಕೆಳಕಂಡಂತಿದೆ.</u>

| ಕ್ರ.ಸಂ. | ವಿಷಯ | ಅಂದಾಜು ವೆಚ್ಚ |
|---|---|---|
| 01. | ಭೂಗೋಳಶಾಸ್ತ್ರ | ರೂ. 73,200–00 |
| 02. | ಸೂಕ್ಷ್ಮ ಜೀವಶಾಸ್ತ್ರ | ರೂ. 1,00,000–00 |
| 03. | ಆಹಾರ ಪೌಷ್ಠಿಕತೆ | ರೂ. 1,00,000–00 |
| 04. | ಭೌತಶಾಸ್ತ್ರ | ರೂ. 80,000–00 |
| 05. | ರಾಸಾಯನಶಾಸ್ತ್ರ | ರೂ. 1,00,000–00 |
| 06. | ಜೈವಿಕ ತಂತ್ರಜ್ಞಾನ | ರೂ. 70,000–00 |
| 07. | ಜೀವ ರಾಸಾಯನಶಾಸ್ತ್ರ | ರೂ. 80,000–00 |
| 08. | ಮನೋವಿಜ್ಞಾನ | ರೂ. 70,000–00 |
| 09. | ಪರಿಸರ ವಿಜ್ಞಾನ | ರೂ. 1,00,000–00 |
| 10. | ಕಂಪ್ಯೂಟರ್ ಸೈನ್ಸ್ | ರೂ. 75,000–00 |
| 11. | ಮಾಹಿತಿ ವಿಜ್ಞಾನ | ರೂ. 50,000–00 |
| 12. | ಗಣಿತಶಾಸ್ತ್ರ | ರೂ. 50,000–00 |

| | | |
|---|---|---|
| 01. | ಎಂ.ಬಿ.ಎ. | ರೂ. 2,35,160–00 |

ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ತರುತ್ತಾ ಅನುಮೋದನೆ ಕೋರಿಸದೆ.

**ತೀರ್ಮಾನ : ಸದರಿ ಕೋರ್ಸುಗಳಿಗೆ ತಗಲುವ ವೆಚ್ಚಗಳನ್ನು ಭರಿಸಲು ಶಿಫಾರಸ್ಸು ಮಾಡಲಾಯಿತು.**

-----

**<u>ವಿಷಯ: ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.</u>**

*****

1. ಕರಾಮುವಿಯ ವಿಜ್ಞಾನ ವಿಭಾಗಗಳು ಪ್ರಾಯೋಗಿಕ ತರಗತಿಗಳನ್ನು ನಡೆಸಲು ಪ್ರಸ್ತುತ ಇತರೆ ಕಾಲೇಜುಗಳ ಲ್ಯಾಬೋರೇಟರಿಗಳನ್ನು ಅವಲಂಬಿಸಿದ್ದು, ಇದರಿಂದ ಆರ್ಥಿಕ ಹೊರೆಯಾಗುತ್ತಿ–

**ಕುಲಪತಿಗಳು** 27/9 **ಕುಲಸಚಿವರು** 27/9

ರುವ ಜೊತೆಗೆ ವಿದ್ಯಾರ್ಥಿಗಳಿಗೆ ತೊಂದರೆಗಳಾಗುತ್ತಿರುವ ಹಿನ್ನೆಲೆಯಲ್ಲಿ, ವಿಜ್ಞಾನ ಭವನದಲ್ಲಿ ಲ್ಯಾಬೊರೊಟರಿ ಪರಿಕರಗಳು ಮತ್ತು ರಸಾಯನಿಕಗಳನ್ನು ವ್ಯವಸ್ಥೆ ಕಲ್ಪಿಸಿಕೊಡುವಂತೆ ಮಾಡಿಕೊಂಡಿರುವ ಮನವಿಯನ್ನು ಮಾನ್ಯ ಕುಲಪತಿಗಳು ಸಭೆಯಲ್ಲಿ ಮಂಡಿಸಿ ಕರಾಮುವಿಯಲ್ಲಿ ಲ್ಯಾಬೊರೇಟರಿಗಳ ವ್ಯವಸ್ಥೆ ಕಲ್ಪಿಸಲು ಅನುಮೋದನೆಗೆ ವಿಷಯ ಮಂಡಿಸಿದರು.

**ತೀರ್ಮಾನ : ಸದರಿ ವಿಷಯವನ್ನು ಚರ್ಚಿಸಿದ ಸಭೆಯ ಪ್ರಸಕ್ತ ಸಾಲಿನಿಂದಲೇ ಪ್ರಾಯೋಗಿಕ ತರಗತಿಗಳನ್ನು ನಡೆಸಲು ಲ್ಯಾಬೊರೇಟರಿ ವ್ಯವಸ್ಥೆಗಳನ್ನು ಕಲ್ಪಿಸಲು ನಿಯಮಾನುಸಾರ ಅಗತ್ಯ ಕ್ರಮವಹಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.**

2. ಡಾ. ಆರ್. ಸುಕನ್ಯ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ ಇವರು ಗೈಡ್‌ಶಿಪ್‌ಗಾಗಿ ದಿನಾಂಕ: 29–07–2019ರಂದು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ವಾಣಿಜ್ಯಶಾಸ್ತ್ರ ಪಿ.ಜಿ. ಅಧ್ಯಯನ ಮಂಡಳಿಯು ದಿನಾಂಕ; 09–09–2019ರಂದು ಪರಿಶೀಲಿಸಿ ಗೈಡ್‌ಶಿಪ್ ನೀಡಬಹುದೆಂದು ಶಿಫಾರಸ್ಸು ಮಾಡಿದೆ. ಈ ಸಂಬಂಧದ ಸಭೆಯ ನಡಾವಳಿಯನ್ನು 14ನೇ ವಿಶೇಷ ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ನಿರ್ಣಯಕ್ಕೆ ಮಂಡಿಸಿದೆ.

**ತೀರ್ಮಾನ : ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.**

-----

ಅಂತಿಮವಾಗಿ 14ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| **ಕುಲಪತಿಗಳು ಹಾಗೂ ಅಧ್ಯಕ್ಷರು** 27/9 | 27/9 **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |